ಶ್ರೀಮತಿ ಉಮಾಶ್ರೀ (ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು)

ಅ) ಹೌದು

ಆ) ಬಯಲು ರಂಗಮಂದಿರ ನಿರ್ಮಿಸಲು ಅನುದಾನದ ನೆರವು ಕೋರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಮನವಿ ಸ್ವೀಕೃತವಾಗಿದ್ದು, ಅನುದಾನದ ಮಿತಿಯಲ್ಲಿ ಧನಸಹಾಯ ನೀಡುವ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

ಇ) **ಮತ್ತು ಈ)** ಬಯಲು ರಂಗಮಂದಿರ ನಿರ್ಮಾಣಕ್ಕೆ ಸ್ಥಳ ಗುರುತಿಸಿ ವರದಿ ನೀಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕರಿಗೆ ಈಗಾಗಲೇ ತಿಳಿಸಲಾಗಿದೆ. ಮಾರ್ಗಸೂಚಿ ನಿಯಮಾನುಸಾರ ಬಯಲು ರಂಗಮಂದಿರ ನಿರ್ಮಾಣಕ್ಕೆ ರೂ. 10.00 ಲಕ್ಷಗಳವರೆಗೆ ಮಂಜೂರು ಮಾಡಲು ಅವಕಾಶವಿದೆ.

ಕುಡಿಯಲು ಯೋಗ್ಯವಲ್ಲದ ನೀರಿರುವ ಯೋಜನೆಗಳು

181(448); ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)

ಅ) ಮಾಗಡಿ ಕ್ಷೇತ್ರ ವ್ಯಾಪ್ತಿಯಲ್ಲಿ ಕುಡಿಯಲು ಯೋಗ್ಯವಿಲ್ಲದ ನೀರಿರುವ ಗ್ರಾಮಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಅಂತಹ ಗ್ರಾಮಗಳು ಯಾವುವು;

ಇ) ಕುಡಿಯಲು ಯೋಗ್ಯವಿಲ್ಲದ ನೀರಿರುವ ಗ್ರಾಮಗಳಲ್ಲಿ ಶುದ್ಧೀಕರಣ ಘಟಕಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಶುದ್ಧೀಕರಣ ಘಟಕಗಳನ್ನು ಯಾವ ಕಾಲಮಿತಿಯಲ್ಲಿ ಸ್ಥಾಪಿಸಲಾಗುವುದು?

ಶ್ರೀ ಎಚ್.ಕೆ. ಪಾಟೀಲ್ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಮತ್ತು ಆ) ಮಾಗಡಿ ವಿಧಾನ ಸಭಾ ಕ್ಷೇತ್ರದಲ್ಲಿ ಬರುವ ಮಾಗಡಿ ತಾಲ್ಲೂಕಿನ 2 ಗ್ರಾಮ – ಹಂಚಿಕುಪ್ಪೆ ಗ್ರಾಮ ಪಂಚಾಯಿತಿಯ ಜೋಡಿಗಟ್ಟೆ ಮತ್ತು ಸಾವನದುರ್ಗ ಸ್ಟೇಟ್ ಫಾರೆಸ್ಟ್ ಮತ್ತು ರಾಮನಗರ ತಾಲ್ಲೂಕಿನ 13 ಗ್ರಾಮ – 1. ಶ್ಯಾನುಭೋಗನಹಳ್ಳಿ 2. ಲಕ್ಷ್ಮೀಪುರ 3. ಬಿಡದಿ 4. ಜಾಲಮಂಗಲ 5. ಉರಗಹಳ್ಳಿ 6. ತಾಳೆಕೆರೆ ಹ್ಯಾಂಡ್ ಪೋಸ್ಟ್ 7. ಹುಳ್ಳೇನಹಳ್ಳಿ 8. ಹುಲಿಕಲ್ 9. ಅಗಲಕೋಟೆ ಹ್ಯಾಂಡ್ ಪೋಸ್ಟ್ 10. ವರದೇನಹಳ್ಳಿ ಹ್ಯಾಂಡ್ ಪೋಸ್ಟ್ 11. ಹೊಸಹಳ್ಳಿ 12. ಬೆಳಗುಂಬ 13. ವಿ.ಜಿ ದೊಡ್ಡಿ ಗ್ರಾಮಗಳಲ್ಲಿನ ಜಲಮೂಲಗಳಲ್ಲಿನ ನೀರು ಕುಡಿಯಲು ಯೋಗ್ಯವಿರುವುದಿಲ್ಲವೆಂದು ನೀರು ಪರೀಕ್ಷಾ ವರದಿಯಿಂದ ತಿಳಿದುಬಂದಿದೆ.

ಇ) ಮಾಗಡಿ ಗ್ರಾಮಗಳಲ್ಲಿ ಹೊಸ ಕೊಳಚೆ ಬಾವಿಗಳನ್ನು ಕೊರೆದು ಕುಡಿಯುವ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ.

2014–15ನೇ ಸಾಲಿನ 2000 ನೀರು ಶುದ್ಧೀಕರಣ ಘಟಕಗಳ ಅಳವಡಿಕೆ ಪೈಕಿ ಮೊದಲ ಹಂತದಲ್ಲಿ 1000 ಜನವಸತಿಗಳನ್ನು ಆಯ್ಕೆ ಮಾಡಿ ದಿನಾಂಕ: 30.01.2015ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದೆ. ಇದರಲ್ಲಿ ರಾಮನಗರ ತಾಲ್ಲೂಕಿನ ಜಾಲಮಂಗಲ ಜನವಸತಿಯನ್ನು ಆಯ್ಕೆ ಮಾಡಿದ್ದು ನೀರು ಶುದ್ಧೀಕರಣ ಘಟಕವು 31ನೇ ಮಾರ್ಚ್, 2015ರೊಳಗೆ ಅನುಷ್ಠಾನವಾಗಲಿದೆ. ಉಳಿದ ಗ್ರಾಮಗಳಿಗೆ ಪರ್ಯಾಯ ವ್ಯವಸ್ಥೆ ಕ್ರಮ ಜಾರಿಯಲ್ಲಿದೆ.